# <u>ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ</u>

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ.)


ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರವರ ಕಛೇರಿ
ಬಿಳಿಕೆರೆ, ಕಾ ಮತ್ತು ಪಾ ಉಪವಿಭಾಗ
ಚಾ.ವಿ.ಸ.ನಿ.ನಿ., ಬಿಳಿಕೆರೆ

ದೂರವಾಣಿ ಸಂಖ್ಯೆ: 08222–240377
E-mail: aeebilikere@rediffmail.com


ಸಂಖ್ಯೆ: ಸ.ಕಾ.ಇಂ(ವಿ)/ಹಾಂ.ಸ/ಬಿ.ಉ.ವಿ/ಕ/2017/591 ದಿನಾಂಕ: 16.09.02017

## ದಿನಾಂಕ:16.09.2017 ರಂದು ಚಾ.ವಿ.ಸ.ನಿ.ನಿ., ಬಿಳಿಕೆರೆ ಉಪ ವಿಭಾಗ ಕಚೇರಿ ಆವರಣದಲ್ಲಿ ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು ರವರ ಅಧ್ಯಕ್ಷತೆಯಲ್ಲಿ ನಡೆದ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆ ನಡಾವಳಿಗಳು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ರವರ ಅಧ್ಯಕ್ಷತೆಯಲ್ಲಿ ಹಾಗೂ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಹುಣಸೂರು ರವರ ಉಪಸ್ಥಿತಿಯಲ್ಲಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬಿಳಿಕೆರೆ ಉಪ ವಿಭಾಗ ರವರು ಎರಡನೇ ವಿದ್ಯುತ್ ಗ್ರಾಹಕರ ಸಂಪರ್ಕ ಸಭೆಯಲ್ಲಿ ಹಾಜರಿದ್ದ ಹಿರಿಯ ಅಧಿಕಾರಿಗಳು, ಗ್ರಾಹಕ ಬಂಧುಗಳು ಹಾಗೂ ಸಿಬ್ಬಂದಿಗಳಿಗೆ ಸ್ವಾಗತ ಕೋರಿದರು.

ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ) ರವರು ವಿದ್ಯುತ್ ಗ್ರಾಹಕ ಜನ ಸಂಪರ್ಕ ಸಭೆಯ ಮಹತ್ವದ ಬಗ್ಗೆ ತಿಳಿಸುತ್ತಾ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ನಿರ್ದೇಶನದ್ವಯ ಪ್ರತಿ 3 ತಿಂಗಳಿಗೊಮ್ಮೆ ಉಪವಿಭಾಗ ಮಟ್ಟದಲ್ಲಿ ಗ್ರಾಹಕ ಸಂಪರ್ಕ ಸಭೆಯನ್ನು ನಡೆಸಲಾಗುವುದು. ಈ ಸಭೆಯಲ್ಲಿ ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ಭಾಗವಹಿಸಿ ವಿದ್ಯುತ್ ಸರಬರಾಜಿನ ಕುಂದುಕೊರತೆಗಳ ಬಗ್ಗೆ ಚರ್ಚಿಸಿ ಸಮಸ್ಯೆಗಳನ್ನು ಪರಿಹರಿಸಲು ಮತ್ತು ಸೇವೆಯನ್ನು ಉನ್ನತೀಕರಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು ಹಾಗೂ ಕಳೆದ ಬಾರಿಯ ಸಭೆಯಲ್ಲಿ ಚರ್ಚಿತವಾದ/ದಾಖಲಾದ ಸಮಸ್ಯೆಗಳು ಹಾಗೂ ಕೈಗೊಂಡಿರುವ ಕ್ರಮಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಗ್ರಾಹಕರುಗಳಿಗೆ ತಿಳಿಸಿದರು.

**<u>ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು/ನೌಕರರು</u>**

1. ಅಧೀಕ್ಷಕ ಇಂಜಿನಿಯರ್(ವಿ), 'ಕಾ' ಮತ್ತು 'ಪಾ' ವೃತ್ತ ಚಾ.ವಿ.ಸ.ನಿ.ನಿ ಮೈಸೂರು.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ವಿಭಾಗ, ಚಾ.ವಿ.ಸ.ನಿ.ನಿ., ಹುಣಸೂರು.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪ ವಿಭಾಗ, ಚಾ.ವಿ.ಸ.ನಿ.ನಿ., ಬಿಳಿಕೆರೆ
4. ಶಾಖಾಧಿಕಾರಿಗಳು: ಬೋಳನಹಳ್ಳಿ ಶಾಖೆ, ಕೆ.ಎಸ್.ಗದ್ದಿಗೆ ಶಾಖೆ
5. ಹಿರಿಯ ಸಹಾಯಕರು ಕಂದಾಯ ಶಾಖೆ, ಬಿಳಿಕೆರೆ ಉಪ ವಿಭಾಗ.
6. ಗ್ರಾಹಕರ ಸಲಹಾ ಸಮಿತಿ ಸದಸ್ಯರು.

## <u>ಮಾನ್ಯ ಗ್ರಾಹಕರ ಸಲಹೆ/ಕೋರಿಕೆಗಳು:</u>

1. **ಶ್ರೀ ಪ್ರಸನ್ನ : ಬಿಳಿಕೆರೆ, ಮೊ.** ನಂ.: 9448739440 ರವರು ಮಾತನಾಡಿ ಬಿಳಿಕೆರೆ ಬೈಪಾಸ್ ರಸ್ತೆ ಬದಿ ಬೀದಿ ದೀಪದ ವ್ಯವಸ್ಥೆ ಮಾಡಿಕೊಡಲು ಕೋರಿರುತ್ತಾರೆ.

   **ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಮಾತನಾಡಿ ಬೀದಿ ದೀಪ ಅಳವಡಿಸುವ ವ್ಯವಸ್ಥೆಯು ಸಂಬಂಧಿಸಿದ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದ್ದು ಸದರಿಯವರ ಕೋರಿಕೆ ಹಾಗೂ ನಿಗಮದ ನಿಯಮವನ್ನು ಪಾಲಿಸುವ ನಿಬಂದನೆ ಮೇರೆಗೆ ಅಂದಾಜು ಪಟ್ಟಿ ತಯಾರಿಸಿ ಕ್ರಮ ವಯಿಸಲಾಗುವುದೆಂದು ತಿಳಿಸಿದರು.

2. **ಶ್ರೀ ನರೇಂದ್ರ : ದೇವರಹಳ್ಳಿ, ಮೊ. ನಂ.: 9902128528** ರವರು ಮಾತನಾಡಿ, ಜಮೀನಿನಲ್ಲಿ ಅಳವಡಿಸಿರುವ ಕಬ್ಬಿಣದ ಕಂಬಗಳನ್ನು ಬದಲಾಯಿಸಲು ಕೋರಿದರು ಹಾಗೂ ಜೋತು ಬಿದ್ದಿರುವ ವಿದ್ಯುತ್ ತಂತಿಗಳನ್ನು ಬಿಗಿಗೊಳಿಸಲು ಕೋರಿದರು.

**ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸುಸಜ್ಜಿತವಾಗಿರುವ ಕಬ್ಬಿಣದ ಕಂಬಗಳಿಂದ ಯಾವುದೇ ರೀತಿಯ ಅಪಾಯವಿರುವುದಿಲ್ಲ, ಒಂದು ವೇಳೆ ತುಕ್ಕು ಹಿಡಿದು ಅಪಾಯ ಸಂಭವಿಸಬಹುದಾದಂತಹ ಕಬ್ಬಿಣದ ಕಂಬಗಳನ್ನು ಗುರುತಿಸಿ ಬದಲಾಯಿಸಲು ಹಾಗೂ ಸ್ಥಳ ಪರಿಶೀಲಿಸಿ ಸೂಕ್ತ ಕ್ರಮ ವಹಿಸಲು ಸಭೆಯಲ್ಲಿ ಹಾಜರಿದ್ದ ಸ.ಕಾ.ಇಂ(ವಿ) ಹಾಗೂ ಶಾಖಾಧಿಕಾರಿಗೆ ಸೂಚಿಸಿದರು.

3. **ಶ್ರೀ ಬಿ.ಕೆ ಕಾಳಿದಾಸನಾಯಕ : ಬಿಳಿಕೆರೆ, ಮೊ.** ನಂ. : 9845403603 ರವರು ಮಾತನಾಡಿ ಜೀನಹಳ್ಳಿ ಕೆರೆಯ ಮಧ್ಯ ಭಾಗದಲ್ಲಿ ಅಳವಡಿಸಿರುವ ವಿದ್ಯುತ್ ಕಂಬವನ್ನು ಸ್ಥಳಾಂತರಿಸಲು ಕೋರಿದರು ಹಾಗೂ ಜೋತು ಬಿದ್ದಿರುವ ತಂತಿಗಳನ್ನು ಸರಿಪಡಿಸಲು ಕೋರಿದರು.

**ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು(ವಿ) ರವರು ಪ್ರಸ್ತುತ ಜೀನಹಳ್ಳಿ ಕೆರೆಯು ನೀರಿನಿಂದ ತುಂಬಿದ್ದು ಕೆರೆಯ ಭಾಗದಲ್ಲಿ ಇರುವ ಎಲ್.ಟಿ ವಿದ್ಯುತ್ ಕಂಬ/ಮಾರ್ಗವನ್ನು ಕೆರೆಯ ನೀರು ಖಾಲಿಯಾದ ನಂತರ ಸ್ಥಳಾಂತರಿಸಲು ಕ್ರಮ ವಹಿಸಲಾಗುವುದು ಎಂದು ತಿಳಿಸಿದರು.

4. **ಶ್ರೀ ಅಶ್ವತನಾರಾಯಣ : ಅತ್ತಿಗುಪ್ಪೆ ಮೊ.** ನಂ.: 9844940981 ರವರು ಮಾತನಾಡಿ ಐ.ಪಿ ಸ್ಥಾವರಕ್ಕೆ ಅಳವಡಿಸಿರುವ ಟಿ.ಸಿ ಓವರ್ ಲೋಡ್ ಆಗಿರುವಬಗ್ಗೆ ಹಾಗೂ Low Voltage ಬಗ್ಗೆ ಅರ್ಜಿ ನೀಡಿದರು.

**ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು(ವಿ) ರವರು ಅತ್ತಿಗುಪ್ಪೆಯ ಸದರಿಯವರ ಐ.ಪಿ ಪ್ರದೇಶದಲ್ಲಿ ಹೆಚ್ಚುವರಿ ವಿದ್ಯುತ್ ಪರಿವರ್ತಕ ಅಳವಡಿಸಲು ಈಗಾಗಲೇ ಅಂದಾಜು ಪಟ್ಟಿಯನ್ನು ತಯಾರಿಸಿ ಮಂಜೂರಾತಿಗೆ ಸಲ್ಲಿಸಲಾಗಿದ್ದು ಜರೂರು ಕ್ರಮ ವಹಿಸಲಾಗುವುದೆಂದು ತಿಳಿಸಿದರು.

5. **ಶ್ರೀ ಅಪ್ಪಾಜಿ ನಾಯಕ : ಬೋಳನಹಳ್ಳಿ : ಮೊ.** ನಂ.: ಇಲ್ಲ ರವರು ವಿದ್ಯುತ್ ಅಡಚಣೆಯ ಬಗ್ಗೆ ದೂರು ನೀಡಿದರು.

**ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸದರಿಯವರ ಸ್ಥಾವರದ ವಿದ್ಯುತ್ ಮಾರ್ಗದಲ್ಲಿ ಆದಷ್ಟು ಮಾರ್ಗ ಮುಕ್ತತೆಗಳನ್ನು ಪಡೆಯುವುದನ್ನು ಕಡಿಮೆ ಮಾಡಿ ಸೂಕ್ತ ತಾಂತ್ರಿಕ ಕೌಶಲ್ಯಗಳನ್ನು ಉಪಯೋಗಿಸಿ ವಿದ್ಯುತ್ ಅಡಚಣೆಯನ್ನು ಕಡಿಮೆ ಮಾಡಿ ಗ್ರಾಹಕರಿಗೆ ಉತ್ತಮ ವಿದ್ಯುತ್ ಸೌಲಭ್ಯ ಒದಗಿಸಲು ಸಭೆಯಲ್ಲಿ ಹಾಜರಿದ್ದ ಸಂಭಂದಿಸಿದ ಶಾಖಾಧಿಕಾರಿಯವರಿಗೆ ಸೂಚಿಸಿದರು.

6. **ಉತ್ತಪ್ಪ : ಬಿಳಿಕೆರೆ, ಮೊ.** ನಂ.: 9901734630 ರವರು ಮಾತನಾಡಿ ಬಿಳಿಕೆರೆ ಉಪ ವಿಭಾಗದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಗ್ರಾಹಕರ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸುತ್ತಿದ್ದಾರೆಂದು ಪ್ರಶಂಶೆಯ ಮಾತುಗಳನ್ನಾಡಿದರು ಮತ್ತು L E D ಬಲ್ಬ್‌ಗಳ ಮಾರಾಟ ಕೇಂದ್ರವನ್ನು ಪುನಃ ಬಿಳಿಕೆರೆಯಲ್ಲಿ ತೆರೆಯುವಂತೆ ಕೋರಿದರು.

**ಕ್ರಮ:** ಇದಕ್ಕೆ ಪ್ರತಿಕ್ರಿಯಿಸಿದ ಅಧೀಕ್ಷಕ ಅಭಿಯಂತರು(ವಿ) ರವರು ಸದ್ಯದಲ್ಲಿಯೇ L E D ಬಲ್ಬ್‌ಗಳ ಪುನರ್ ಮಾರಾಟದ ವ್ಯವಸ್ಥೆ ಮಾಡಿಕೊಡುವುದಾಗಿ ತಿಳಿಸಿದರು.

ಅಂತಿಮವಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಸಭೆಯಲ್ಲಿ ಹಾಜರಿದ್ದು, ಚರ್ಚಿಸಿದ ಹಾಗೂ ತಮ್ಮ ಅಮೂಲ್ಯ ಸಲಹೆ/ಕೋರಿಕೆಗಳನ್ನು ನೀಡಿದ ಎಲ್ಲಾ ಸಲಹಾ ಸಮಿತಿ ಸದಸ್ಯರಿಗೂ ಹಾಗೂ ಗ್ರಾಹಕ ಬಂಧುಗಳಿಗೂ ವಂದಿಸಿದರು.

"ವಂದನೆಗಳೊಂದಿಗೆ"

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),

ಚಾ.ವಿ.ಸ.ನಿ.ನಿ.,, ಬಿಳಿಕೆರೆ ಉಪವಿಭಾಗ